ಓ.ಎಸ್. - 69/2016

ಪಿ.ಡಬ್ಲೂ - 2

<u>ಸಾಕ್ಷಿಯನ್ನು ದಿಃ 13.10.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ.ಜೆಡ್.ಎ. ರವರಿಂದ</u>

ಮೃತ ಒಂದನೇ ವಾದಿ ಕೆ.ಎಸ್. ಗಜಾನನ ಅವರಿಗೆ ಹೆಂಡತಿ ಹಾಗೂ 2 ಜನ ಹೆಣ್ಣು ಮಕ್ಕಳು ಇದ್ದು ಅವರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿಲ್ಲ. ಕೆ.ಎಸ್. ಗಜಾನನ ಅವರಿಗೆ ಯಾವ ಯಾವ ಆಸ್ತಿಗಳಲ್ಲಿ ಹಕ್ಕು ಇತ್ತೋ ಆ ಆಸ್ತಿಗಳಲ್ಲಿ ಅವನ ವಾರಸುದಾರರಾದ ಹೆಂಡತಿ ಮತ್ತು ಮಕ್ಕಳಿಗೂ ಸಹ ಹಕ್ಕು ಇದೆ ಎಂದರೆ ಸರಿ. ನನ್ನ ಪ್ರಕಾರ ದಾವಾ ಆಸ್ತಿಯಲ್ಲಿಯೂ ಸಹ ಗಜಾನನ ಅವರ ಹೆಂಡತಿ ಮಕ್ಕಳಿಗೆ ಹಕ್ಕು ಇದೆ.

ದಾವಾ ಆಸ್ತಿಯ ವಿಸ್ತೀರ್ಣ ಇಷ್ಟೇ ಇದೆ ಎಂದು ಮತ್ತು ಸದರಿ ಆಸ್ತಿಯ ಮಾಲೀಕರೆಂದು ನಾನು ಹಿಂದಿನ ಪುರಸಭೆ ಮತ್ತು ಈಗಿನ ನಗರಸಭೆಯವರು ನೀಡಿರುವ ಖಾತೆ ಎಕ್ಸ್ ಟ್ರಾಕ್ಟ್ ಗಳಲ್ಲಿರುವ ಅಳತೆಯ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿ. ನಿಪಿ-6 ರ ಪ್ರಕಾರ ದಾವಾ ಆಸ್ತಿಯು ಸರ್ವೆ ನಂಬರ್ ಜಮೀನಿನಲ್ಲಿ ಇತ್ತು ಎಂದು ನಾನು ಸಾಕ್ಷಿ ಹೇಳಿದ್ದೆ, ಆದರೆ ಸದರಿ ಜಮೀನು ಭೂ ಪರಿವರ್ತನೆ ಆದ ಬಗ್ಗೆ ನಾನು ಈವರೆಗೂ ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ನಿಪಿ-6 ರಲ್ಲಿ ದಾವಾ ಆಸ್ತಿಯ ಉದ್ದದ ಅಳತೆ ಬರೆದಿರುವುದಿಲ್ಲ ಆದರೆ ಬಾಂದುಕಲ್ಲು ಗಡಿಯವರೆಗೆ ಎಂದು ನಮೂದು ಇದೆ. 1950-51 ರಿಂದ ಇಲ್ಲಿಯವರೆಗಿನ ದಾವಾ ಆಸ್ತಿಯ ಖಾತಾ ಎಕ್ಸ್ ಟ್ರಾಕ್ಟ್ ಗಳನ್ನು ಪುರಸಭೆ ಹಾಗೂ ನಗರಸಭೆರವರು ನೀಡಿದರೆ ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಈಗ ನನ್ನ ಅನುಭವದಲ್ಲಿರುವ ದಾವಾ ಆಸ್ತಿಯ ಅಳತೆ 275 ಅಡಿ ಉದ್ದ ಇದ್ದು, ಆದರೆ ಅದು ಮೊದಲು 302 ಅಡಿ ಇತ್ತು. 2010 ರಲ್ಲಿ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ರಸ್ತೆಯನ್ನು ಮಾಡಿದ್ದು ಸದರಿ ರಸ್ತೆ ಆವಿನಹಳ್ಳಿಯ ಮುಖ್ಯ ರಸ್ತೆಯ ಅಡ್ಡ ರಸ್ತೆಗೆ ಹೋಗಿ ಸೇರುತ್ತದೆ. ಈ ಕುರಿತು 2010 ರಲ್ಲಿಯೇ ನಗರ ಸಭೆಯವರಿಗೆ ನನ್ನ ಜಾಗದಲ್ಲಿ ಅತಿಕ್ರಮಣ ಮಾಡಿ ರಸ್ತೆ ನಿರ್ಮಾಣ ಮಾಡುತ್ತಿದ್ದೀರಿ ಎಂದು ನೋಟೀಸ್ ಕೊಟ್ಟಿದ್ದೆ. ಸದರಿ ನೋಟೀಸ್ ನನ್ನ ಬಳಿ ಇದ್ದರೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಪಿ-8 ರಲ್ಲಿ ನನ್ನ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಬಾಂದುಗಲ್ಲು ಗಡಿ ಎಂದು ನಮೂದು ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಾನು 2013 ರಲ್ಲಿ ಪಡೆದಿರುತ್ತೇನೆ. ನಾನು ವಾದ ಪತ್ರದ ಜೊತೆ ಹಾಜರುಪಡಿಸಿದ ದಾವಾ ಸ್ವತ್ತಿನ ನಕ್ಷೆಯಲ್ಲಿ ದಕ್ಷಿಣದ ಕಡೆ ಅರಳೀಕಟ್ಟೆ ರಸ್ತೆ ಇದೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ನಕ್ಷೆಯಲ್ಲಿರುವ ಪಶ್ಚಿಮ ದಿಕ್ಕಿನ ಕಡೆ ಇರುವ ರಸ್ತೆಯು ಮುಂದೆ ದಕ್ಷಿಣದ ಕಡೆಯಿಂದ ಉತ್ತರದ ಕಡೆಗೆ ಸುಮಾರು 500 ಅಡಿ ಮುಂದುವರೆದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರದ ಕಡೆಗೆ 2 ಮನೆಗಳು ಇವೆ ಎಂದು ಉತ್ತರಿಸುತ್ತಾರೆ. ಸದರಿ ಮನೆಗಳು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಮಾಹಿತಿ ಇದೆ. ನನ್ನ ಮನೆಯ ಉತ್ತರ ದಿಕ್ಕಿನಲ್ಲಿರುವ 2 ಸ್ವತ್ತುಗಳ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಆಸ್ತಿಯಲ್ಲಿ ಎಷ್ಟು ಒತ್ತುವರಿ ಆಗಿದೆ ಎಂದು ತಿಳಿಯಲು ನ್ಯಾಯಾಲಯದ ನಿಯೋಗಿಯ

ಮೂಲಕ ಅಳತೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಗರಸಭೆಯವರು ದಾವಾ ಆಸ್ತಿಯ ಬಗ್ಗೆ ಮೂಲ ದಾಖಲೆಯನ್ನು ಹಾಜರುಪಡಿಸುವಂತೆ ನನಗೆ ನೋಟೀಸ್ ಕೊಟ್ಟಿರುವುದಿಲ್ಲ. ನಗರಸಭೆಯವರು ನನಗೆ ನೋಟೀಸ್ ಕೊಟ್ಟಿದ್ದರೂ ಸಹ ನಾನು ಅದನ್ನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಯಾವತ್ತಿಗೂ ಸಹ ನಿರ್ದಿಷ್ಟವಾಗಿ ಉದ್ದದ ಅಳತೆ ಇರಲಿಲ್ಲ ಎಂದರೆ ಸರಿಯಲ್ಲ. 1956-57 ರಿಂದ 2005-06 ರವರೆಗೆ ನನ್ನ ಸ್ವತ್ತಿನ ಅಳತೆ 36 ಇಂಟು 275 ಅಡಿ ಇತ್ತು ಎಂದು ನನಗೆ ಮಾಹಿತಿ ಇದೆ. 2006-07 ನೇ ಸಾಲಿನಲ್ಲಿ ನಗರಸಭೆಯ ಸಿಬ್ಬಂದಿಯಾದ ಮಂಜುನಾಥ ಬಿನ್ ಕುಪ್ಪಯ್ಯ ಎನ್ನುವವರ ಜೊತೆ ಶಾಮೀಲಾಗಿ ನಗರಸಭೆಯ ಖಾತೆ ದಾಖಲೆಗಳಲ್ಲಿ ನನ್ನ ಸ್ವತ್ತಿನ ಉದ್ದದ ಅಳತೆಯನ್ನು 275 ರಿಂದ 302 ಅಡಿ ಎಂದು ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅರ್ಜಿ ಕೊಟ್ಟ ನಂತರ ದಾಖಲೆಗಳ ಆಧಾರದ ಮೇಲೆ ನನ್ನ ಆಸ್ತಿಯನ್ನು ಅಳತೆ ಮಾಡಿ ಆ ರೀತಿ ಉದ್ದದ ಅಳತೆಯನ್ನು ನಮೂದು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ನನ್ನ ಆಸ್ತಿಯನ್ನು ಅಳತೆ ಮಾಡಲು ನೀಡಿದ ಅರ್ಜಿಯ ಸ್ವೀಕೃತಿ ಪತ್ರ ನನ್ನ ಬಳಿ ಇರಬಹುದು. ಸದರಿ ದಾಖಲೆಯನ್ನು ಹುಡುಕಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಿಪಿ-5 ರಂತೆ ಇರುವ ದಾಖಲೆಯಲ್ಲಿರುವ ಅಳತೆಯನ್ನು ಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ ಆದರೆ ಸದರಿ ದಾಖಲೆಯ ನಕಲನ್ನು ಮಾತ್ರ ನಾನು ಪಡೆದಿರುತ್ತೇನೆ. ಸದರಿ ದಾಖಲೆಯ ಪ್ರಕಾರ ಯಾವ ಸಂದರ್ಭದಲ್ಲಿ ಸರ್ವೆಯರ್ ರವರು ಆಸ್ತಿಗಳನ್ನು ಅಳತೆ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಮಂಜುನಾಥ ಬಿನ್ ಕುಪ್ಪಯ್ಯ ರವರು ಬೇರೆ ಬೇರೆ ಕಾರಣದಿಂದ ಅವರನ್ನು ಕೆಲಸದಿಂದ ವಜಾ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಯಾವುದೇ ಆಸ್ತಿಯ ಖಾತೆಯ ಬದಲಾವಣೆ ಅಥವಾ ಅಳತೆಯ ಬದಲಾವಣೆಯಾದರೆ ಆ ಬಗ್ಗೆ ನಗರಸಭೆಯವರ ಆದೇಶ ಇರುತ್ತದೆ ಎಂದರೆ ಸರಿ. ನನ್ನ ಆಸ್ತಿಯ ಉದ್ದಳತೆಯನ್ನು 275 ರಿಂದ 302 ಅಡಿಯವರೆಗೆ ಹೆಚ್ಚಿಗೆ ಮಾಡಿರುವ ಬಗ್ಗೆ ನಗರಸಭೆಯವರ ಯಾವುದೇ ಆದೇಶ ಇರುವುದಿಲ್ಲ ಸದರಿ ಅಳತೆಯನ್ನು ನಗರಸಭೆಯ ಸಿಬ್ಬಂದಿಯಾದ ಮಂಜುನಾಥ ಬಿನ್ ಕುಪ್ಪಯ್ಯ ರವರು ಆದೇಶವಿಲ್ಲದೆ ತಿದ್ದುಪಡಿ ಮಾಡಿರುವುದರಿಂದ ಅವನಿಗೆ ಮತ್ತು

ನನಗೆ ನಗರಸಭೆಯವರು ನೋಟೀಸ್ ನೀಡಿರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ರೀತಿಯಾಗಿ ಮೋಸತನದಿಂದ ಆಸ್ತಿಯ ಉದ್ದಳತೆಯನ್ನು 302 ಅಡಿ ಎಂದು ಹೆಚ್ಚಿಗೆ ಮಾಡಿಕೊಂಡು ನಗರಸಭೆಗೆ ಸಂಬಂಧಿಸಿದ ರಸ್ತೆ ನನ್ನದೆಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯು ಅನಾದಿಕಾಲದಿಂದ ಇರುವ ರಸ್ತೆಯಾಗಿದ್ದು ಅದರ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು 36 ಇಂಟು 275 ಅಥವಾ 36 ಇಂಟು 302 ಅಳತೆಯ ಆಸ್ತಿಗೆ ಮಾಲೀಕನಾಗಿರುವುದಿಲ್ಲ ಎಂದರೆ ಸರಿಯಲ್ಲ, ಕೇವಲ ಖಾತೆಯ ಆಧಾರದ ಮೇಲೆ ಮಾಲೀಕ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ನಿಪಿ-6 ರಂತೆ ಖರೀದಿ ಮಾಡಿರುವ ಆಸ್ತಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ  ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ  ವ್ಯವಹಾರ  ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ